Karnataka Board

aglasem.com

# ಪ್ರಥಮ ಭಾಷೆ ಕನ್ನಡ ಮಧ್ಯವಾರ್ಷಿಕ ಪರೀಕ್ಷೆ ಸೆಪ್ಟೆಂಬರ್ 2022

ತರಗತಿ : 10ನೇ | ವಿಷಯ ಸಂಕೇತ : 01 ಕೆ

ಅವಧಿ : 3.15 ನಿ | ಗರಿಷ್ಠ ಅಂಕಗಳು : 100

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 6X1=6

1. ಭೂಮಿಜಾತೆ ಪದದಲ್ಲಿರುವ ಅನುನಾಸಿಕಾಕ್ಷರ

ಎ) ಭೂ ಬಿ). ಮಿ ಸಿ). ಜಾ ಡಿ). ತೆ

2. ಗುಣಸಂಧಿಗೆ ಉದಾಹರಣೆಯಾದ ಪದವಿದು

ಎ) ಸುರಾಸುರ ಬಿ). ಮಳೆಗಾಲ ಸಿ). ಸೂರ್ಯೋದಯ ಡಿ). ಊರೂರು

3. ಜಾಡ್ಯ ಪದದ ಸಮಾನಾರ್ಥಕ ಪದವಿದು

ಎ). ಜಾಡು ಬಿ). ಕೊಳೆ ಸಿ). ಕೇಳು ಡಿ). ರೋಗ

4. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು. ಈ ವಾಕ್ಯಕ್ಕೆ ಉದಾಹರಣೆಯಾಗಿದೆ.

ಎ). ಸಾಮಾನ್ಯ ಬಿ). ಸಂಯೋಜಿತ ಸಿ). ಮಿಶ್ರ ಡಿ). ಸಂಯುಕ್ತ

5. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಎ). ಉದ್ಧರಣ ಬಿ). ವಾಕ್ಯವೇಷ್ಟನ ಸಿ). ವಿವರಣಾತ್ಮಕ ಡಿ). ಆವರಣ

6. ದ್ವಿತೀಯ ವಿಭಕ್ತಿಯ ಕಾರಕಾರ್ಥವಿದು

ಎ). ಕರ್ತಾರ್ಥ ಬಿ). ಕರಣಾರ್ಥ ಸಿ). ಸಂಪ್ರದಾನ ಡಿ).ಕರ್ಮಾರ್ಥ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ. 4X1=4

7 ಬೇಗನೆ : ಸಾಮಾನ್ಯಾರ್ಥಕಾವ್ಯಯ :: ಸಾಕು :...........................

8. ಮುಂಗೈ : ಅಂಶಿ ಸಮಾಸ :: ಮುರಾರಿ :................................

9. ಮೂಲೆ ಮೂಲೆ : ದ್ವಿರುಕ್ತಿ :: ದಯಾದಾಕ್ಷಿಣ್ಯ :.......................

10. ಕಳುವ್ಯಾರೇ : ಕಳುಹಿಸಿದ್ದಾರೆ :: ಇಸವಾಸ :......................

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7X1=7

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

12 ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ಎಂದು ಕವಿ ಹೇಳಿದ್ದಾರೆ?

schools.aglasem.com

aglasem.com

13. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?

14. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?

15. ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?

16. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?

17. ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಹೆಸರಾಗಿದ್ದವರು ಯಾರು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ **10X2=20**

18. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ತಿಳಿಸಿ.

19. ಸಂಪತ್ತನ್ನು ಕಾಪಾಡಲು ಎದುರಾಗುವ ಕಷ್ಟಗಳನ್ನು ತಿಳಿಸಿ.

20. ಶಬರಿಯು ರಾಮನಿಂದ ಮೋಕ್ಷ ಬಯಸಿದ್ದ ರೀತಿಯನ್ನು ತಿಳಿಸಿ.

21. ಹಲಗಲಿಯ ಬೇಡರು ದಂಗೆ ಹೇಳಲು ಕಾರಣವೇನು

22. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

23. ಕ್ರಿಯಾ ಸ್ವಾತಂತ್ರ್ಯದ ಬಗ್ಗೆ ಅಂಬೇಡ್ಕರ್ ರವರ ಚಿಂತನೆಗಳೇನು? ತಿಳಿಸಿ.

24. ಬ್ರಿಟಿಷರು ಹಲಗಲಿಯಲ್ಲಿ ಲೂಟಿ ಮಾಡಿದ ವಸ್ತುಗಳಾವಾವು?

25. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?

26. ಪೆರಿಯಾರ್ ಚಳುವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

27. ಜಲಿಯನ್ ವಾಲಾಬಾಗ್ ನಲ್ಲಿರುವ ಒಕ್ಕಣಿ ಏನು?

V. ಕೆಳಗಿನ ಕವಿಗಳ ಅಥವಾ ಸಾಹಿತಿಗಳ ಜನ್ಮಸ್ಥಳ ಕಾಲ ಕೃತಿ ಮತ್ತು ಬಿರುದು ಅಥವಾ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ **2X3=6**

28. ವಿ ಕೃ ಗೋಕಾಕ್

29. ಕುಮಾರವ್ಯಾಸ

VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. **1X3=3**

30. ಲಲನೆ ಪಡೆದೀಯೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠರದೇವ ಮೂರನೆಯಾತ ಕಲಿಭೀಮ

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. **1X3=3**

31. "ಒಳಗಿನ ಮಂದಿ ಗುಂಡು ಹೊಡೆದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ **1X3=3**

32. ಕೂಡಿ ಬಾಳಿದರೆ ಸ್ವರ್ಗ ಸುಖ. ಅಥವಾ ತಾಳಿದವನು ಬಾಳಿಯಾನು.

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ **6X3=18**

33. "ನಾಚುತಿಹೆನೀ ಪೂಜೆಯೀ ನಲುಮೆಯಿಂದ"

schools.aglasem.com
aglasem.com

34. "ದುಡ್ಡು ದುರಭಿಮಾನದ ತವರು"

35. " ಕೈಗಾರಿಕೀಕರಣ ಇಲ್ಲವೆ ಅವನತಿ"

36. " ನಾಳಿನ ಕನಸನ್ನು ಬಿತ್ತೋಣ"

37. "ಸಾರ್ವಭೌಮರ ನೆತ್ತಿಯ ಕುಕ್ಕಿ"

38. "ಮೋಸ ಮಾಡಿ ನಮ್ಮ ದೇಶ ಗೆದಿತಾರೊ"

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ 1X4=4

39. ನೀಲಮೇಘಮಂಡಲ ......................................

...........................................................................

...........................................................................

...........................................................................

ಹಕ್ಕಿಹಾರುತಿದೆ ನೋಡಿದಿರಾ?

ಅಥವಾ

ಯುಗಯುಗಗಳ..............................................

...........................................................................

...........................................................................

...........................................................................

ಹಕ್ಕಿಹಾರುತಿದೆ ನೋಡಿದಿರಾ?

XI. ಕೆಳಗಿನ ಪದ್ಯ ಭಾಗದ ಸಾರಾಂಶವನ್ನು ಅದರಲ್ಲಿ ಅಡಕವಾಗಿರು ಮೌಲ್ಯದೊಂದಿಗೆ ಬರೆಯಿರಿ. 1X4=4

40. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

XII. ಕೆಳಗಿನ ಪ್ರಶ್ನೆಗಳಿಗೆ 8 - 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ 2X4=8

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

ಅಥವಾ

ವೆಸ್ಟ್ ಮಿನಿಸ್ಟರ್ ಅಬೆ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುವುದು ಕವಿ ಶಿವರುದ್ರಪ್ಪನವರ ಆಶಯ?

ಅಥವಾ

schools.aglasem.com

aglasem.com

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ಬರೆಯಿರಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 2+2=4

43. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ, ಕರ್ನಾಟಕ ಬಿಟ್ಟು ಭಾರತವಿಲ್ಲ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಪುರಸ್ಕಾರ ಚಳುವಳಿಯಲ್ಲಿ ಧುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಹುರಿದುಂಬಿಸಿದರಲ್ಲದೆ, ತಾವೂ ಸ್ಥಾಪಿಸಿ ಅವರಿಗೆ ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನು ಮರೆಸುತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ ನಮ್ಮ ನಮ್ಮ ಸಂಸ್ಕೃತಿಯನ್ನು ಪೋಷಿಸುವ "ರಾಷ್ಟ್ರೀಯ ಶಿಕ್ಷಣ ಚಳುವಳಿ" ಯು ಆಗ ಭಾರತದಲ್ಲೆಲ್ಲಾವಾಪಿಸಿತು. ವೆಂಕಟರಾಯರು ಈ ಚಳುವಳಿಯಲ್ಲೂ ಧುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

ಅ. ಆಲೂರು ವೆಂಕಟರಾಯರು ಸ್ವದೇಶೀ ಚಳುವಳಿಯ ಮೂಲಕ ಹೇಗೆ ಮಾದರಿ ಎನಿಸಿದರು?

ಆ. ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ 1X5=5

44. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿನುತ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ರಾಷ್ಟ್ರೀಯ ಪೋಷಣ ಮಾಸಾಚರಣೆಯನ್ನು ಕುರಿತು ಶಿವಮೊಗ್ಗದಲ್ಲಿರುವ ಸುಲೋಚನ ಎಂಬ ಹೆಸರಿನ ನಿಮ್ಮ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ

ಅಥವಾ

ನಿಮ್ಮನ್ನು ದಾರವಾಡದ ಸರ್ಕಾರಿ ಪ್ರೌಢಶಾಲೆಯ ಚಂದು ಎಂದು ಭಾವಿಸಿಕೊಂಡು ಜಿಲ್ಲೆಯಲ್ಲಿ ಮಳೆ ಹೆಚ್ಚಾಗಿರುವುದರಿಂದ ಹಾನಿಯಾಗಿರುವ ರಸ್ತೆಗಳನ್ನು ಸರಿಪಡಿಸುವಂತೆ ಕೋರಿ ಮಾನ್ಯ ಜಿಲ್ಲಾಧಿಕಾರಿಗೊಂದು ಪತ್ರ ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಐದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1X5=5

45. ರಾಷ್ಟ್ರೀಯ ಹಬ್ಬಗಳ ಮಹತ್ವ

ಅಥವಾ

ಅತಿವೃಷ್ಟಿಯಿಂದ ಆಗುವ ಅನಾಹುತಗಳು

*******************

schools.aglasem.com
AglaSem Earn while Learn Program. Send your papers and get paid.
Contact: support@aglasem.com
aglasem.com